### 18.82 ಕೋಟಿ ಯೂನಿಟ್‌ಗೆ ತಲುಪಿದ ದಿನ ಬಳಕೆ ವಿದ್ಯುತ್ ಪ್ರಮಾಣ

# ರಾಜ್ಯವ್ಯಾಪಿ ವಿದ್ಯುತ್ ಕಡಿತಕ್ಕೆ ಕ್ಷಣಗಣನೆ

■ **ವಿಕ ಸುದ್ದಿಲೋಕ** ರಾಯಚೂರು

ವಿದ್ಯುತ್ ಉತ್ಪಾದನೆ, ಪೂರೈಕೆಗಿಂತ ಬಳಕೆ ಪ್ರಮಾಣ ಹೆಚ್ಚಿದಾಗ ಒತ್ತಡ ಸರಿದೂಗಿಸಲು ರಾಜ್ಯದ ಕೆಲವು ಭಾಗಗಳಲ್ಲಿ ವಿದ್ಯುತ್ ಕಡಿತ ಅನಿವಾರ್ಯವಾಗಿದೆ ಎಂದು ಕೆಪಿಟಿಸಿಎಲ್ ಉನ್ನತ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ದಿನ ಬಳಕೆ ವಿದ್ಯುತ್ ಪ್ರಮಾಣ 188.22 ದಶಲಕ್ಷ ಯೂನಿಟ್‌ಗೆ ತಲುಪಿದೆ. ಒತ್ತಡದ ಅವಧಿ (ಪೀಕ್ ಲೋಡ್)ಯಲ್ಲಿ ಗರಿಷ್ಠ 8,723 ಮೆಗಾ ವ್ಯಾಟ್, ಕನಿಷ್ಠ 7,027 ಮೆಗಾ ವ್ಯಾಟ್ ಬಳಕೆಯಾಗುತ್ತಿದೆ. ಆರ್‌ಟಿಪಿಎಸ್, ಬಿಟಿಪಿಎಸ್ ಸೇರಿ ಶಾಖೋತ್ಪನ್ನ ಮೂಲದಿಂದ 51.774 ದಶಲಕ್ಷ , ಜಲ ಮೂಲದಿಂದ 40.249 ದಶಲಕ್ಷ, ಕೇಂದ್ರೀಯ ವಿದ್ಯುತ್ ಜಾಲ ದಿಂದ ರಾಜ್ಯದ ಪಾಲು 42.038 ದಶಲಕ್ಷ ಯೂನಿಟ್ ಲಭ್ಯವಾಗಿದೆ.

**ಆರ್‌ಟಿಪಿಎಸ್ ಒಂದನೇ ಘಟಕ ಸ್ಥಗಿತ**

ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಆರ್‌ಟಿಪಿಎಸ್)ದ ಒಂದನೇ ಘಟಕ, ವಿದ್ಯುತ್ ಉತ್ಪಾದನೆ ನಿಲ್ಲಿಸಿದ್ದು, ಮಂಗಳವಾರ ಸಂಜೆ ಪುನರಾರಂಭವಾಗುವ ನಿರೀಕ್ಷೆಯಿದೆ ಎಂದು ಮೂಲಗಳು ತಿಳಿಸಿವೆ. ''ಘಟಕದ ಹಬೆಯಂತ್ರ ಕೊಳವೆಯಲ್ಲಿ ಸೋರಿಕೆ ಉಂಟಾಗಿದ್ದರಿಂದ ಕಾರ್ಯ ಚಟುವಟಿಕೆ ಸ್ಥಗಿತಗೊಳಿಸಲಾಗಿದೆ. ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ,'' ಎಂದು ಆರ್‌ಟಿಪಿಎಸ್ ಕಾರ್ಯನಿರ್ವಾಹಕ ನಿರ್ದೇಶಕ 'ವಿಜಯ ಕರ್ನಾಟಕ'ಕ್ಕೆ ತಿಳಿಸಿದರು. ''ಕೇಂದ್ರದ ಉಳಿದ ಏಳು ಘಟಕಗಳು ಪೂರ್ಣ ಪ್ರಮಾಣದ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿವೆ. ಒಟ್ಟು 31.13 ದಶಲಕ್ಷ ಯೂನಿಟ್ ವಿದ್ಯುತ್, ರಾಜ್ಯ ಜಾಲಕ್ಕೆ ಸೋಮವಾರ ರವಾನೆಯಾಗಿದೆ,'' ಎಂದು ಹೇಳಿದರು

**ನಿತ್ಯ ಒಂದೆರಡು ತಾಸು:** ಉಡುಪಿ ವಿದ್ಯುತ್ ಕಂಪನಿ (ಯುಪಿಸಿಎಲ್) ಜತೆ ದೀರ್ಘಾವಧಿ ವಿದ್ಯುತ್ ಖರೀದಿ ಒಪ್ಪಂದವಾಗಿದೆ. ಸದ್ಯಕ್ಕೆ ಈ ಕಂಪನಿಯಿಂದ ಪ್ರತಿದಿನ 26.29 ದಶಲಕ್ಷ ಯೂನಿಟ್ ದೊರೆಯುತ್ತಿದೆ. ಜಿಂದಾಲ್ ಸೇರಿ ನಾನಾ ಮೂಲಗಳಿಂದ 23.95 ದಶಲಕ್ಷ ಯೂನಿಟ್ ಖರೀದಿಸಿ, ಎಲ್ಲ ವಿದ್ಯುತ್ ಸರಬರಾಜು ಕಂಪನಿ (ಎಸ್ಕಾಮ್ಸ್)ಗಳಿಗೆ ಒದಗಿಸುತ್ತಿದ್ದು, ಶಾಖೋತ್ಪನ್ನ ಮತ್ತು ಜಲ ಮೂಲದಲ್ಲಿ ವಿದ್ಯುತ್ ಉತ್ಪಾದನೆಯಲ್ಲಿ ಕುಸಿದರೆ ಬೇಡಿಕೆ ಸರಿದೂಗಿಸಲು ದಿನಕ್ಕೆ ಒಂದೆರಡು ತಾಸು ವಿದ್ಯುತ್ ಕಡಿತ ಉಂಟಾಗಲಿದೆ. ಅನಿಯಮಿತ ಲೋಡ್‌ಶೆಡ್ಡಿಂಗ್ ಜಾರಿಗೊಳಿಸಿಲ್ಲ ಎನ್ನುತ್ತದೆ ಕೆಪಿಟಿಸಿಎಲ್ ಮೂಲ.

**ತಪ್ಪಲಿದೆ ಬವಣೆ:** ರಾಜ್ಯ ಲೋಡ್ ಡಿಸ್ಪ್ಯಾಚಿಂಗ್ ಕೇಂದ್ರವೇ ವಿದ್ಯುತ್ ಬಳಕೆ ಏರಿಳಿತ ನಿಭಾಯಿಸುತ್ತದೆ. ಬೆಂಗಳೂರು, ಮಂಗಳೂರು ಹೊರತುಪಡಿಸಿ, ಉಳಿದ ಕೆಲವು ಭಾಗಗಳಲ್ಲಿ ಅನಿರ್ದಿಷ್ಟ ವಿದ್ಯುತ್ ಕಡಿತವಾಗುತ್ತದೆ ಎಂದು ಮೂಲಗಳು ಹೇಳಿವೆ. ರಾಜ್ಯ ಸರಕಾರ ನಾನಾ ಖಾಸಗಿ ಕಂಪನಿಗಳಿಂದ ಅಲ್ಪಾವಧಿ ವಿದ್ಯುತ್ ಖರೀದಿ ಒಪ್ಪಂದ ಪ್ರಕ್ರಿಯೆ ಜಾರಿಯಲ್ಲಿಟ್ಟಿದ್ದು, ಈ ಬಾರಿ ಬೇಸಿಗೆ ವಿದ್ಯುತ್ ಬವಣೆ ಬಿಸಿ ತಟ್ಟುವ ಸಾಧ್ಯತೆ ಕಡಿಮೆ. ಲೋಕಸಭೆ ಚುನಾವಣೆ ಈ ಆಶಾವಾದಕ್ಕೆ ಮುಖ್ಯ ಕಾರಣವೆನ್ನುತ್ತದೆ ಎಸ್ಕಾಮ್ಸ್ ಮೂಲ.

---

# ಶೀಘ್ರದಲ್ಲೇ ಟ್ರಾನ್ಸ್‌ಫಾರ್ಮರ್ ಸ್ಥಳಾಂತರ: ಬೆಸ್ಕಾಂ

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದ ಮುರುಗೇಶ್ ಪಾಳ್ಯ ಸಮೀಪದ ಚಲ್ಲಘಟ್ಟದಲ್ಲಿ ಶಿಥಿಲಾವಸ್ಥೆಯಲ್ಲಿರುವ ಟ್ರಾನ್ಸ್‌ಫಾರ್ಮರ್ ಅನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಬೆಸ್ಕಾಂ ಕೊನೆಗೂ ಮುಂದಾಗಿದೆ.

ಒಂದು ಕಡೆಗೆ ವಾಲಿಕೊಂಡಿರುವ ಟ್ರಾನ್ಸ್‌ಫಾರ್ಮರ್ ಆಗಲೋ ಈಗಲೋ ಬೀಳುವ ಸ್ಥಿತಿಯಲ್ಲಿದೆ. ಅಕ್ಕಪಕ್ಕದ ಮನೆಗಳ ಮೇಲೆ ಬೀಳುವ ಸಾಧ್ಯತೆ ಇರುವುದರಿಂದ ದೊಡ್ಡ ಅನಾಹುತ ಸಂಭವಿಸುವ ಸಾಧ್ಯತೆ ಇದೆ. ಈ ಸಂಬಂಧ ಸ್ಥಳೀಯ ನಿವಾಸಿಗಳು ಹಲವಾರು ಬಾರಿ ಬೆಸ್ಕಾಂ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಈ ಸಂಬಂಧ 'ವಿಜಯ ಕರ್ನಾಟಕ ' ಫೆ.24ರಂದು, 'ಚಲ್ಲಘಟ್ಟ ನಿವಾಸಿಗಳ ಬವಣೆಗೆ ಪರಿಹಾರ ಎಂದು?' ಎಂಬ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಿತ್ತು. ವರದಿ ಓದಿ ಬೆಸ್ಕಾಂ ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದು ಟ್ರಾನ್ಸ್‌ಫಾರ್ಮರ್ ಅನ್ನು ಶೀಘ್ರವೇ ಬೇರೆ ಕಡೆಗೆ ಸ್ಥಳಾಂತರಿಸಲು ತೀರ್ಮಾನಿಸಿದ್ದಾರೆ.

ಬೆಸ್ಕಾಂನ ಕೋರಮಂಗಲ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಎಸ್ ಟಿ ಶಾಂತಮಲ್ಲಪ್ಪ ಸೋಮವಾರ ಬೆಳಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಲ್ಲದೆ, ಇನ್ನು ನಾಲ್ಕು ದಿನಗಳಲ್ಲಿ ಟ್ರಾನ್ಸ್‌ಫಾರ್ಮರ್ ಸ್ಥಳಾಂತರ ಮಾಡುವಂತೆ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಬಿ ಎಲ್ ನರಸಿಂಹಮೂರ್ತಿ ಅವರಿಗೆ ಸೂಚನೆ ನೀಡಿದರು.

---

# ಆರ್‌ಟಿಪಿಎಸ್ 1ನೇ ಘಟಕ ಸ್ಥಗಿತ

ರಾಯಚೂರು: ಶಕ್ತಿನಗರದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಒಂದನೇ ಘಟಕ ತಾಂತ್ರಿಕ ದೋಷದಿಂದ ಸೋಮವಾರ ಬೆಳಗ್ಗೆ ಸ್ಥಗಿತಗೊಂಡಿದೆ. ವಿದ್ಯುತ್ ಕೇಂದ್ರದ ಒಂದನೇ ಘಟಕದ ಬಾಯ್ಲರ್ ಟ್ಯೂಬ್‌ನಲ್ಲಿ ಕಂಡುಬಂದ ದೋಷದಿಂದಾಗಿ ಕೆಪಿಸಿ ಅಧಿಕಾರಿಗಳು ವಿದ್ಯುತ್ ಉತ್ಪಾದನೆ ಸ್ಥಗಿತಗೊಳಿಸಿ ದುರಸ್ತಿ ಕಾರ್ಯ ಕೈಗೆತ್ತಿಕೊಂಡಿದ್ದಾರೆ. ವಿದ್ಯುತ್ ಕೇಂದ್ರದ ಇನ್ನುಳಿದ 7 ಘಟಕಗಳಿಂದ ಒಟ್ಟು 31 ಮಿಲಿಯನ್ ಯೂನಿಟ್ ವಿದ್ಯುತ್ ರಾಜ್ಯ ಜಾಲಕ್ಕೆ ಸೋಮವಾರ ಬೆಳಗ್ಗೆವರೆಗೆ ರವಾನೆಯಾಗಿದೆ ಎಂದು ಆರ್‌ಟಿಪಿಎಸ್ ಮೂಲಗಳು ತಿಳಿಸಿವೆ.

---

# ಬೆಸ್ಕಾಂ ಜಂಕ್ಷನ್ ಬಾಕ್ಸ್ ಪರಿಶೀಲನೆ

ಬೆಂಗಳೂರು: ಬಸವನಗುಡಿಯಲ್ಲಿ ಬೆಸ್ಕಾಂ ಜಂಕ್ಷನ್ ಬಾಕ್ಸ್‌ಗಳು ಅಪಾಯಕಾರಿ ಸ್ಥಿತಿಯಲ್ಲಿವೆ ಎಂದು ಫೆ.24ರಂದು 'ಕನ್ನಡಪ್ರಭ'ದಲ್ಲಿ ಕೋಟೇಶ್ವರ ಸೂರ್ಯನಾರಾಯಣ ಎಂಬುವರ ದೂರು 'ಪೌರ ಸಮಸ್ಯೆ' ಅಂಕಣದಲ್ಲಿ ಪ್ರಕಟಗೊಂಡ ಹಿನ್ನೆಲೆಯಲ್ಲಿ ಬೆಸ್ಕಾಂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಜೊತೆಗೆ, ದೂರುದಾರರನ್ನು ಕೂಡ ಸಂಪರ್ಕಿಸಿ ಮಾತುಕತೆ ನಡೆಸಿದ್ದಾರೆ. ದುಸ್ಥಿತಿಯಲ್ಲಿರುವ ಬಾಕ್ಸ್‌ಗಳನ್ನು ಬದಲಾಯಿಸಲಾಗುವುದು. ಗಾಂಧಿನಗರದ ಐದು ಬಾಕ್ಸ್‌ಗಳನ್ನು ಬದಲಾಯಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

---

# ಎ.ಸಿ ಸ್ಫೋಟ: ಮೂವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ಟಿ.ನಗರ ಸಮೀಪದ ಭಟ್ಟರಹಳ್ಳಿಯ ಮನೆಯೊಂದರಲ್ಲಿ ಸೋಮವಾರ ಹವಾನಿಯಂತ್ರಣ ಉಪಕರಣ (ಎಸಿ) ಸ್ಫೋಟಗೊಂಡು ಮೂರು ಮಂದಿ ಗಾಯಗೊಂಡಿದ್ದಾರೆ.

ಭಟ್ಟರಹಳ್ಳಿ ಮೂರನೇ ಅಡ್ಡರಸ್ತೆ ನಿವಾಸಿ ಶಿವರುದ್ರಪ್ಪ (33), ಪತ್ನಿ ವೀಣಾ (26) ಮತ್ತು ಎರಡೂವರೆ ವರ್ಷದ ಮಗಳು ಐಶ್ವರ್ಯಾ ಗಾಯಗೊಂಡವರು.

ನಡುಮನೆಯಲ್ಲಿದ್ದ ಎಸಿ ಮಧ್ಯಾಹ್ನ ಒಂದು ಗಂಟೆ ಸುಮಾರಿಗೆ ಸ್ಫೋಟಿಸಿದೆ. ಈ ವೇಳೆ ನಡುಮನೆಯಲ್ಲಿದ್ದ ಮೂವರಿಗೂ ಗಾಯಗಳಾಗಿವೆ. ಸ್ಫೋಟದ ಸದ್ದು ಕೇಳಿದ್ದ ನೆರೆಹೊರೆಯವರು ಕೂಡಲೇ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಎಸಿ ಸ್ಫೋಟಿಸಿರಬಹುದು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಆರ್.ಟಿ.ನಗರ ಪೊಲೀಸರು ಮಾಹಿತಿ ನೀಡಿದ್ದಾರೆ.

---

# 'ಲೈನಮನ್' ಹುದ್ದೆ ತುಂಬಿ

ಹಿಂದಿದ್ದ ಬಿಜೆಪಿ ಸರ್ಕಾರ, 2011ರ ಡಿಸೆಂಬರ್ 9ರಂದು ಕರ್ನಾಟಕ ರಾಜ್ಯದ ವಿದ್ಯುತ್ ಸರಬರಾಜು ಕಂಪೆನಿಗಳಲ್ಲಿ ಖಾಲಿ ಇರುವ 'ಸಹಾಯಕ ಮಾರ್ಗದಾಳು' ಹುದ್ದೆಗಳ ಆಯ್ಕೆಗೆ ಅರ್ಜಿ ಆಹ್ವಾನಿಸಿತ್ತು. ಅದರಲ್ಲಿ ಐದು ಸಂಸ್ಥೆಗಳಿಗೆ ಪ್ರತ್ಯೇಕ ಅರ್ಜಿ ಮತ್ತು ಶುಲ್ಕವನ್ನು ನಿಗದಿಪಡಿಸಿತ್ತು. ಬಹುತೇಕ ಅಭ್ಯರ್ಥಿಗಳು ಐದೂ ಸಂಸ್ಥೆಗಳಿಗೆ ಅರ್ಜಿಯನ್ನು ಹಾಕಿದ್ದರು. ಅರ್ಜಿ ಶುಲ್ಕ ಕೂಡ ದುಬಾರಿಯಾಗಿತ್ತು (ರೂ 400). ಆದರೆ ಇದುವರೆಗೂ ಆಯ್ಕೆ ಪ್ರಕ್ರಿಯೆ ನಡೆದಿಲ್ಲ.

ಎಂಟು ವರ್ಷಗಳಿಂದ 'ಲೈನಮನ್' ಹುದ್ದೆಗಳನ್ನೇ ಭರ್ತಿ ಮಾಡಿಲ್ಲ. ಐ.ಟಿ.ಐ. (ಎಲೆಕ್ಟ್ರಿಷಿಯನ್) ಕೋರ್ಸ್ ಮಾಡಿರುವವರಲ್ಲಿ ಬಹುಪಾಲು ಮಂದಿ ನಿರುದ್ಯೋಗಿಗಳಾಗಿದ್ದಾರೆ. ಇಂಧನ ಸಚಿವರು ದಯವಿಟ್ಟು ಮತ್ತೆ ಹೊಸದಾಗಿ ಅರ್ಜಿ ಕರೆದು ಆಯ್ಕೆ ಪ್ರಕ್ರಿಯೆ ನಡೆಸಬೇಕಾಗಿ ವಿನಂತಿ. ಎಲ್ಲಾ ಎಸ್ಕಾಂಗಳಲ್ಲಿ ಒಂದೇ ದಿವಸ ಪರೀಕ್ಷೆ ನಡೆಸಿದರೆ ಪ್ರತಿಯೊಬ್ಬರಿಗೂ ನ್ಯಾಯ ಸಿಗುತ್ತದೆ.

—ಕಿರಣ್ ಭೈರಾಪುರ
ಬೆಂಗಳೂರು